ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:- DCE/BUD/GCC/1/2023

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು,ದಿನಾಂಕ: 29.08.2023

ಇವರಿಗೆ,

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ
ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು
ಮತ್ತು ಸಂಸ್ಕೃತ ಕಾಲೇಜುಗಳು,

ಮಾನ್ಯರೆ,

ವಿಷಯ:- ಹಿಂದಿನ ಆರ್ಥಿಕ ವರ್ಷದ / ವರ್ಷಗಳ ಬಾಕಿ ವೇತನದ ಕೋರಿಕೆ ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂಖ್ಯೇ: ಆಇ 04 ಟಿಎಫ್ ಪಿ 2023 ದಿ:08.08.2023
2.ಸರ್ಕಾರದ ಪತ್ರ ಸಂಖ್ಯೆ:ಇಡಿ 147 ಡಿಸಿಇ 2022(ಇ) ದಿನಾಂಕ: 03.11.2022

******

ಮೇಲ್ಕಂಡ ವಿಷಯ ಮತ್ತು ಉಲ್ಲೇಖ(01)ರ ಸರ್ಕಾರದ ಸುತ್ತೋಲೆಯಲ್ಲಿ 2021-22 ಮತ್ತು 2022-23ನೇ ಸಾಲಿಗೆ ಸಂಬಂಧಿಸಿದಂತೆ ಬಾಕಿ ವೇತನ ಮತ್ತು ಭತ್ಯೆಗಳನ್ನು ಸರ್ಕಾರದ ಆದೇಶ ದಿನಾಂಕದಿಂದ ಮೂರು ತಿಂಗಳುಗಳ ಒಳಗಾಗಿ ಸೆಳೆಯಲು ಆರ್ಥಿಕ ಇಲಾಖಾಬೆಯು ಸಹಮತಿ ನೀಡಲಾಗಿದ್ದು ಸದರಿ ಆದೇಶವನ್ನು ಇಲಾಖಾ ವ್ಯಾಪ್ತಿಯ ಎಲ್ಲಾ ಡಿಡಿಓಗಳಿಗೆ ಪರಿಚಲಿಸಲಾಗಿದೆ.

ಅದರಂತೆ, ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮತ್ತು ಸಂಸ್ಕೃತ, ಕಾಲೇಜುಗಳ ಬೋಧಕ / ಬೋಧಕೇತರ ಸಿಬ್ಬಂದಿಗಳ 2021-22 ಮತ್ತು 2022-23ನೇ ಸಾಲಿಗೆ ಸಂಬಂಧಿಸಿದಂತೆ ಬಾಕಿ ವೇತನ ಮತ್ತು ಭತ್ಯೆಗಳನ್ನು ಪಾವತಿಸಲು ಅಗತ್ಯವಿರುವ ಅನುದಾನಕ್ಕಾಗಿ ಬೇಡಿಕೆಯನ್ನು ಈ ಪತ್ರಕ್ಕೆ ಅಡಕಗೊಳಸಿರುವ ಅನುಬಂದಗಳಲ್ಲಿ ಪ್ರಾಂಶುಪಾಲರ ದೃಡೀಕರಣದೊಂದಿಗೆ ದಿನಾಂಕ: 05-09-2023ರ ಸಂಜೆ 5.30ರ ಒಳಗಾಗಿ (HARD COPY)ಯನ್ನು ಈ ಕಛೇರಿಗೆ ಸಲ್ಲಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ತಪ್ಪಿದಲ್ಲಿ ತಮ್ಮ ವಿವರಣೆ ಏನೂ ಇರುವುದಿಲ್ಲವೆಂದು ಭಾವಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

ಉಲ್ಲೇಖ(02)ರ ಸರ್ಕಾರದ ಪತ್ರದಲ್ಲಿ ಬೋಧಕರುಗಳು ಮತ್ತು ತತ್ಸಮಾನ ವೃಂದದವರುಗಳಿಗೆ, ಸ್ಥಾನೀಕರಣದ ಆರ್ಥಿಕ ಸೌಲಭ್ಯವನ್ನು ಸ್ಥಾನೀಕರಣದ ಮಂಜೂರಾತಿ ಆದೇಶದ ದಿನಾಂಕದಿಂದ ಭವಿಷ್ಯಾರ್ಥಿಯಾಗಿ ಪಾವತಿಸಲು ಸೂಚಿಸಿದ್ದು ಅದರಂತೆ ಲೆಕ್ಕಾಚಾರ ಮಾಡತಕ್ಕದ್ದು. ವ್ಯತಿರಿಕ್ತವಾಗಿ ಆರ್ಥಿಕ ಸೌಲಭ್ಯ ಪಾವತಿಸಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿ/ ನೌಕರರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗುವುದು ಹಾಗೂ ನಷ್ಟದ ಮೊತ್ತವನ್ನು ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಂದ ವಸೂಲಿ ಮಾಡಲಾಗುವುದು.

ಅಡಕ: ಉಲ್ಲೇಖಿತ ಪತ್ರ ಮತ್ತು ಅನುಬಂಧ-1&2
(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ತಮ್ಮ ವಿಶ್ವಾಸಿ,

ಕಾಲೇಜು ಶಿಕ್ಷಣ ನಿರ್ದೇಶಕರು

ಪ್ರತಿಗಳನ್ನು:-

1. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
2. ಕಛೇರಿ ಪ್ರತಿ